**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

**ಎಸ್.ಸಿ. 59/2022**

1. ಗುರುಮಠಕಲ್ ಪೊಲೀಸಠಾಣೆ .....ಫಿರ್ಯಾದಿ

ವಿರುದ್ದ

1. ಮಹೇಶ .....ಆರೋಪಿ

## <u>ದೋಷಾರೋಪಣೆ</u>

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತಯಾದ

1. ಮಹೇಶ ತಂದೆ ಬಸಯ್ಯ ಕಲಾಲ, ವಯಸ್ಸುಃ 28 ವರ್ಷ, ಉದ್ಯೋಗಃ ವ್ಯಾಪಾರ ಸಾಃ ಹಿಮ್ಲಾಪುರ ತಾಃ ಗುರುಮಠಕಲ್ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿಃ 07.02.2020 ರಂದು ಗುರುಮಠಕಲ್ ಠಾಣಾ ಸರಹದ್ದಿನ ಹಿಮ್ಲಾಪೂರ ಗ್ರಾಮದ ಮಧ್ಯಾಹ್ನ 03.00 ಗಂಟೆಯ ಸುಮಾರು ಆರೋಪಿಯಾದ ನೀವು ನಿಮ್ಮ ಮನೆಯ ಮುಂದೆ ಅಂಗಳದಲ್ಲಿ ಅಕ್ರಮವಾಗಿ ಮಾನವ ಸೇವಿಸಿದರೆ ಜೀವಕ್ಕೆ ಹಾನಿ ಉಂಟಾಗುವ ಸಿ.ಹೆಚ್.ಪುಡಿಯಿಂದ ಹೆಂಡವನ್ನು ಮಾರಾಟಕ್ಕಾಗಿ ತಯಾರಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 273 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಅಕ್ರಮವಾಗಿ ಹೆಂಡವನ್ನು ಸಿ.ಹೆಚ್. ಪುಡಿಯನ್ನು ಹಾಕಿ ತಯಾರಿಸಿದ್ದು ಅದನ್ನು ಸೇವಿಸಿದರೆ ಮನುಷ್ಯನ ಪ್ರಾಣಕ್ಕೆ ಅಪಾಯ ಉಂಟಾಗುತ್ತದೆ ಎಂದು ಗೊತ್ತಿದ್ದರು ಸಹ ಸದರಿ ಸಿ.ಹೆಚ್ ಪುಡಿಯನ್ನು ಹಾಕಿ ಹೆಂಡವನ್ನು ತಯಾರಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 284 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಒಟ್ಟು 50 ಪ್ಯಾಕೇಟಗಳಲ್ಲಿ 50 ಕೆ,ಜಿ ಸಿ.ಹೆಚ್ ಪುಡಿಯ ಅಂದಾಜು ರೂ,75,000/- ರೂಪಾಯಿ ಪ್ಲಾಸ್ಟಿಕ ಪ್ಯಾಕೇಟಗಳಲ್ಲಿ ಕಟ್ಟಿದ ಹೆಂಡದ 75 ಪ್ಯಾಕೇಟಗಳು ಹಾಕಿ

ಮಾರಾಟ ಮಾಡಲು ಪ್ರಯತ್ನಿಸಿದ್ದು, ಅದು ಮಾನವ ಜೀವಕ್ಕೆ ಅಪಾಯ ಉಂಟು ಮಾಡುವ ವಿಷಯುಕ್ತ ಹೆಂಡ ಎಂದು ಗೊತ್ತಿದ್ದರು ಸಹ ಮಾರಾಟ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 328 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಿ.ಹೆಚ. ಪುಡಿಯಿಂದ ತಯಾರಿಸಿದ ಹೆಂಡವನ್ನು ಮಾರಾಟ ಮಾಡುವುದಕ್ಕಾಗಿ ತಯಾರಿಸಿದ್ದು, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 32 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು 50 ಪ್ಯಾಕೇಟಗಳಲ್ಲಿ ಕಟ್ಟಿದ ಹೆಂಡದ 75 ಪ್ಯಾಕೇಟಗಳು ಹಾಕಿ ಮಾರಾಟ ಮಾಡಲು ಹೊಂದಿದ್ದು, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 34 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 13.08.2025 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.